




ಡಾ. ಎಸ್. ರಾಮಮೂರ್ತಿ

# 12-3-2015ರಿಂದ 18-3-2015ರವರೆಗೆ



**ಮೇಷ**

ವಾರದ ಆರಂಭದಲ್ಲಿ ಕೋಪ. ಹಿರಿಯರ ಮೇಲೆ ವಿಶ್ವಾಸದ ಕೊರತೆ. ಉದ್ಯೋಗದಲ್ಲಿ ಒತ್ತಡ. ಕ್ರಯ ವಿಕ್ರಯಗಳಲ್ಲಿ ಹಿನ್ನಡೆ. ಆರೋಗ್ಯ ವ್ಯತ್ಯಯ. ಕುಟುಂಬ ಸದಸ್ಯರಿಂದ ಸಹಕಾರ. ಹಣದ ಸಮಸ್ಯೆ ಬಗೆಹರಿಯುವುದು, ಕೆಲಸ ಕಾರ್ಯಗಳಲ್ಲಿ ಸಫಲತೆ, ವ್ಯಾಪಾರರಂಗದಲ್ಲಿ ಲಾಭ, ಆಪ್ತರ ಭೇಟಿ. ಶುಭದಿನ: 16. ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ.



**ವೃಷಭ**

ವಾರದ ಆರಂಭದಲ್ಲಿ ಸಂತಸ. ನಿರೀಕ್ಷೆಯಂತೆ ನಡೆಯುವ ಕಾರ್ಯಗಳು. ಆಪ್ತ ಮಿತ್ರರ ಆಗಮನ. ಹಿತಕರ ಘಟನೆ, ವಾರದ ಮಧ್ಯಭಾಗದಲ್ಲಿ ಒತ್ತಡ. ಉದ್ಯೋಗದಲ್ಲಿ ಅಶಾಂತಿ, ಕುಟುಂಬ ಸದಸ್ಯರಲ್ಲಿ ಭಿನ್ನಾಭಿಪ್ರಾಯ, ವ್ಯಾಪಾರದಲ್ಲಿ ಹಾನಿ. ವಾಹನಗಳಿಂದ ತೊಂದರೆ, ವಾರಾಂತ್ಯದಲ್ಲಿ ಸ್ಥಿರ ಮನಸ್ಸು. ಶುಭ ದಿನ: 13. ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ.



**ಮಿಥುನ**

ವಾರದ ಮಧ್ಯಭಾಗದವರೆಗೂ ಸೌಖ್ಯ. ಧೈರ್ಯ ಪ್ರಾಪ್ತಿ. ಸಂಘ– ಸಂಸ್ಥೆಗಳಿಂದ ಸಹಾಯ. ಉದ್ಯೋಗದಲ್ಲಿ ಮುನ್ನಡೆ, ವ್ಯಾಪಾರದಲ್ಲಿ ಲಾಭ. ಗೃಹ ನವೀಕರಣ ಯೋಜನೆಗಳು. ಕುಟುಂಬದಲ್ಲಿ ಶಾಂತ ವಾತಾವರಣ, ವಾರಾಂತ್ಯದಲ್ಲಿ ಚಂಚಲತೆ. ಅನಾವಶ್ಯಕ ಖರ್ಚು, ವೃತ್ತಿ ಪ್ರವೃತ್ತಿಗಳಲ್ಲಿ ಹಿನ್ನಡೆ. ಶುಭದಿನ: 14. ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಕಟಕ**

ಕೆಲಸ ಕಾರ್ಯಗಳು ಸಕಾಲಕ್ಕೆ ಮುಗಿಯುವುದು. ಆಟ ಪಾಠಗಳಲ್ಲಿ ಮೇಲುಗೈ, ವ್ಯಾಪಾರದಲ್ಲಿ ಲಾಭ ವೃದ್ಧಿ. ವಸ್ತ್ರಾಭರಣ ಖರೀದಿ ಯೋಜನೆ. ವಿವಾದಗಳಲ್ಲಿ ಜಯ. ಹಿಂದಿನ ತಪ್ಪುಗಳ ಚಿಂತನೆ. ಸೋದರರೊಂದಿಗೆ ಸಮಾಲೋಚನೆ, ಯಂತ್ರೋಪಕರಣಗಳು ಸುಸ್ಥಿತಿಯಲ್ಲಿ, ದೈವೀಕ ಕಾರ್ಯಗಳಲ್ಲಿ ಆಸಕ್ತಿ. ಶುಭದಿನ: 15. ಗಣೇಶ ಮತ್ತು ದತ್ತಾತ್ರೇಯ ಅಷ್ಟೋತ್ತರ ಪಠಿಸಿ.



**ಸಿಂಹ**

ವಾರದ ಆರಂಭದಲ್ಲಿ ಬೇಸರ. ಕೆಲಸ ಕಾರ್ಯಗಳಲ್ಲಿ ತಪ್ಪುಗಳಾಗುವಿಕೆ. ಆರೋಗ್ಯ ವ್ಯತ್ಯಯ, ವಾರಾಂತ್ಯದಲ್ಲಿ ಹಾನಿ. ಪೆಟ್ಟಾಗುವ ಸಂಭವ. ವಾರದ ಮಧ್ಯಭಾಗದಿಂದ ಅನುಕೂಲ, ಮನೋಬಲ ಹೆಚ್ಚುವುದು. ಉದ್ಯೋಗದಲ್ಲಿ ಮನಃಶಾಂತಿ, ಲೇವಾದೇವಿಗಳಲ್ಲಿ ಲಾಭ. ಪ್ರೀತಿ ಪಾತ್ರರಿಂದ ಸಹಾಯ. ವಾಹನ ಸೌಖ್ಯ. ಶುಭದಿನ: 16. ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ.



**ಕನ್ಯಾ**

ವಾರದ ಆರಂಭದಲ್ಲಿ ಹಿತಕರ ಘಟನೆಗಳು, ಕುಟುಂಬ ಸದಸ್ಯರಲ್ಲಿ ಒಮ್ಮತ, ನಿರೀಕ್ಷೆಯಂತೆ ಕಾರ್ಯ ಸಿದ್ಧಿ, ಲೇವಾದೇವಿಗಳಲ್ಲಿ ಸೂಕ್ತ ಲಾಭ, ಬರಬೇಕಾದ ಹಣ ಬರುವುದು, ವಾರದ ಮಧ್ಯಭಾಗದಲ್ಲಿ ಆತಂಕ, ವಿಪರೀತ ಶ್ರಮ, ನಿದ್ರಾಭಂಗ, ಉದ್ಯೋಗ ವೃತ್ತಿಯಲ್ಲಿ ತಪ್ಪಾಗುವಿಕೆ, ವ್ಯಾಪಾರ ವಹಿವಾಟುಗಳಲ್ಲಿ ಹಾನಿ. ಶುಭದಿನ 16 ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ತುಲಾ**

ವಾರದ ಮಧ್ಯಭಾಗದವರೆಗೂ ಮನಃಶಾಂತಿ. ನಿರೀಕ್ಷೆಯಂತೆ ಕಾರ್ಯ ಸಾಧನೆ. ಕುಟುಂಬದಲ್ಲಿ ಶಾಂತ ವಾತಾವರಣ. ಹಳೆಯ ಸ್ನೇಹಿತರ ಭೇಟಿ. ಲೇವಾದೇವಿಗಳಲ್ಲಿ ಲಾಭ, ವಾಹನ ಸೌಖ್ಯ, ಪತ್ರವ್ಯವಹಾರದಲ್ಲಿನ ಒತ್ತಡ ನಿವಾರಣೆ, ವಾರಾಂತ್ಯದಲ್ಲಿ ಸೋಮಾರಿತನ. ಅನಾವಶ್ಯಕ ಖರೀದಿ, ವೃತ್ತಿ ಪ್ರವೃತ್ತಿಗಳಲ್ಲಿ ಅಸಮಾಧಾನ. ಶುಭದಿನ: 14 ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ವೃಶ್ಚಿಕ**

ಭಯ ನಿವಾರಣೆಯಾಗುವುದು. ಉದ್ಯೋಗದಲ್ಲಿ ಮುನ್ನಡೆ. ವ್ಯಾಪಾರದಲ್ಲಿ ಲಾಭ, ವಿದೇಶಿ ವ್ಯವಹಾರಗಳಲ್ಲಿ ಆಸಕ್ತಿ ಮೂಡುವುದು. ಮಕ್ಕಳು ಸಹಕಾರ ನೀಡುವರು, ದೇವತಾಕ್ಷೇತ್ರ ದರ್ಶನ ಯೋಜನೆ. ಕುಟುಂಬ ಸದಸ್ಯರಲ್ಲಿ ಒಮ್ಮತದ ನಿರ್ಧಾರಗಳು, ಹಿತಕರ ಸುದ್ದಿ. ಶುಭದಿನ: 16. ಗಣೇಶ ಮತ್ತು ಶಿವ ಅಷ್ಟೋತ್ತರ ಪಠಿಸಿ.



**ಧನಸ್ಸು**

ವಾರದ ಆರಂಭದಲ್ಲಿ ಅಶಾಂತಿ. ಅನಾವಶ್ಯಕ ಖರ್ಚು. ಕೆಲಸದಲ್ಲಿ ನಿರಾಸಕ್ತಿ, ಹಿರಿಯರೊಂದಿಗೆ ವಿವಾದ. ವ್ಯಾಪಾರದಲ್ಲಿ ಹಿನ್ನಡೆ, ಆರೋಗ್ಯ ವ್ಯತ್ಯಯ. ವಾರದ ಮಧ್ಯಭಾಗದಿಂದ ಅನುಕೂಲ. ಉದ್ಯೋಗದಲ್ಲಿ ಪ್ರಗತಿ, ಅಧಿಕಾರಿ ವರ್ಗದವರಿಂದ ಗೌರವ ಹಾಗೂ ಪ್ರಶಂಸೆ, ಹಿತಕರ ಸಂದೇಶ. ಶುಭದಿನ: 16. ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಮಕರ**

ವಾರದ ಆರಂಭದಲ್ಲಿ ಸಂತಸ. ಶ್ರಮವಿಲ್ಲದೆ ಕಾರ್ಯ ಸಾಧನೆ. ಗುರುಹಿರಿಯರಿಂದ ಸಹಕಾರ. ವಾರದ ಮಧ್ಯಭಾಗದಲ್ಲಿ ಒತ್ತಡ. ಉದ್ಯೋಗದಲ್ಲಿ ತಪ್ಪಾಗುವಿಕೆ. ಅಕಾಲ ಭೋಜನ, ಮಿತ್ರರ ಮೇಲೆ ಸಿಟ್ಟು. ವಾಹನಗಳಿಂದ ಖರ್ಚು, ವ್ಯಾಪಾರ ವೃತ್ತಿಗಳಲ್ಲಿ ಹಾನಿ. ವಸ್ತುಗಳು ಕೈಯಿಂದ ಜಾರಿ ಬೀಳುವ ಸಾಧ್ಯತೆ. ವಾರಾಂತ್ಯ ಅನುಕೂಲ. ಶುಭದಿನ: 13 ಲಕ್ಷ್ಮೀ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಕುಂಭ**

ವಾರದ ಮಧ್ಯಭಾಗದವರೆಗೂ ಮನಃಶಾಂತಿ. ಕಾರ್ಯಕಲಾಪಗಳು ಸಮಯಕ್ಕೆ ಸರಿಯಾಗಿ ಪೂರ್ಣವಾಗುವುದು. ಆತ್ಮೀಯರೊಂದಿಗೆ ಸಮಾಲೋಚನೆ. ಬಂಧುಗಳಿಂದ ಸಲಹೆ. ತಕರಾರುಗಳನ್ನು ಬಗೆಹರಿಸಿಕೊಳ್ಳುವ ಚಿಂತನ.ಅಧಿಕ ಖರ್ಚು, ಉದ್ಯೋಗದಲ್ಲಿ ಒತ್ತಡ, ವ್ಯಾಪಾರದಲ್ಲಿ ಹಾನಿ, ಅನಾರೋಗ್ಯ. ಶುಭದಿನ: 14. ಗಣೇಶ ಮತ್ತು ವಿಷ್ಣು ಅಷ್ಟೋತ್ತರ ಪಠಿಸಿ.



**ಮೀನ**

ವಾರದ ಆರಂಭದಲ್ಲಿ ಬೇಸರ. ನಿರ್ಧಾರಗಳನ್ನು ತೆಗೆದುಕೊಳ್ಳಲು ಭಯ, ಉದ್ಯೋಗದಲ್ಲಿ ಅಸಮಾಧಾನ. ವ್ಯಾಪಾರದಲ್ಲಿ ಹಾನಿ. ಪೆಟ್ಟಾಗುವ ಸಾಧ್ಯತೆ. ವಾರದ ಮಧ್ಯಭಾಗದಿಂದ ಸಮಾಧಾನ. ಕೆಲಸ ಕಾರ್ಯಗಳಲ್ಲಿ ಸಫಲತೆ. ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ಖರ್ಚು ನಿಯಂತ್ರಣಕ್ಕೆ ಬರುವುದು, ಹಿತಕರ ಸುದ್ದಿ. ಶುಭದಿನ: 16. ಗಣೇಶ ಮತ್ತು ದುರ್ಗಾ ಅಷ್ಟೋತ್ತರ ಪಠಿಸಿ.